**<u>ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>**

**<u>ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ</u>**

**ಸಿಸಿ ಸಂಖ್ಯೆ: 274/2024**

ಚಾ.ಸಾ–01, ಪ್ರಾ.ಸಾ–01

| | | |
|---|---|---|
| ಹೆಸರು | : | ಬಿ. ಮನೋಹರ ರಾಜೇ ಅರಸ್ |
| ತಂದೆಯ ಹೆಸರು | : | ಲೇಟ್ ಬಾಲಕೃಷ್ಣರಾಜೇ ಅರಸ್ |
| ವಯಸ್ಸು | : | 67 |
| ವೃತ್ತಿ | : | ಅಡಿಗೆ ಕೆಲಸ |
| ವಾಸ | : | ವಾಟಾಳು ಗ್ರಾಮ, ತಿ. ನರಸೀಪುರ ತಾಲ್ಲೂಕು. |

**<u>ದಿನಾಂಕ 27.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

ಚಾಸಾ–2 ನನ್ನ ಮಗಳು. ಚಾಸಾ–3 ನನ್ನ ಹೆಂಡತಿ. ಚಾಸಾ–4 ಮತ್ತು 5 ರವರ ಪರಿಚಯವಿಲ್ಲ. ಆರೋಪಿತನ ಪರಿಚಯವಿಲ್ಲ. ಆತ ನನ್ನ ಮಗಳನ್ನು ಅಪಹರಿಸಿಲ್ಲ. ನಾನು ದೂರು ನೀಡಿಲ್ಲ. ನನ್ನ ಸಮಕ್ಷಮ ಪಂಚನಾಮ ಜರುಗಿಸಿಲ್ಲ. ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿಲ್ಲ.

ನನಗೆ ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿಗಳಿವೆ. ಆ ದಾಖಲೆಗಳು ದೂರು ಮತ್ತು ಪಂಚನಾಮಗಳಾಗಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 2 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

**<u>ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ</u>**

ಸಿಸಿ ಸಂಖ್ಯೆ: 274/2024

**ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 28.11.2023 ರಂದು ಬೆಳಿಗ್ಗೆ 2.30 ಗಂಟೆ ಸಮಯದಲ್ಲಿ ತಿ. ನರಸೀಪುರ ತಾಲ್ಲೂಕಿನ ನಮ್ಮ ಗ್ರಾಮದಿಂದ ನನ್ನ ಮಗಳನ್ನು ಆರೋಪಿತ ಅಪಹರಿಸಿರುತ್ತಾನೆ ಎಂದರೆ ಸರಿಯಲ್ಲ. ಹಾಗಾಗಿ ನಿಪಿ–1 ರಂತೆ ದೂರನ್ನು ನಾನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 30.11.2023 ರಂದು ಸಂಜೆ 4.00 ರಿಂದ 4.30 ಗಂಟೆ ಸಮಯದಲ್ಲಿ ಪೊಲೀಸರು ನಾನು ತೋರಿಸಿದಂತೆ ಘಟನಾ ಸ್ಥಳದಲ್ಲಿ ಚಾಸಾ–4 ಮತ್ತು 5 ರವರ ಸಮಕ್ಷಮ ಪಂಚನಾಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 03.12.2023 ರಂದು ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ನಾನು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)

ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**